**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**
**CC No.465/2023**

**PW-1 CW-1**

| | | |
|---|---|---|
| ಸಾಕ್ಷಿದಾರನ ಹೆಸರು | : | ಸೈಯದಬಾಬಾಜಾನ್ ತಂದೆ ಸೈಯದ್‌ಯುಸುಫ್ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮಸರಕಲ್ |
| ಪ್ರಮಾಣೀಕರಿಸಿದ ದಿನಾಂಕ | : | 09-01-2025 |

---

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಚಾಸಾ-2 ರಿಂದ 5 ರವರ ಪರಿಚಯ ಇರುತ್ತದೆ. ಚಾಸಾ-6 ನನಗೆ ತಮ್ಮನಾಗಬೇಕು. ಆರೋಪಿತರು ನಮ್ಮ ಊರಿನವರಾಗಿದ್ದು ಪರಿಚಯವಿರುತ್ತಾರೆ.

ಈಗ 08 ವರ್ಷಗಳ ಹಿಂದೆ ಮಸರಕಲ್ ಗ್ರಾಮದ ಕನಕ ಸರ್ಕಲ್ ಬಳಿ ನನ್ನ ತಮ್ಮ ಮತ್ತು ಆರೋಪಿತರ ನಡುವೆ ಜಗಳ ಆಗುತ್ತಿದೆ ಎಂದು ಸ್ಥಳದಲ್ಲಿದ್ದವರು ಫೋನ್ ಮಾಡಿ ನನಗೆ ವಿಷಯ ತಿಳಿಸಿದ್ದು ತಕ್ಷಣ ನಾನು ಮನೆಯಿಂದ ಸ್ಥಳಕ್ಕೆ ಹೋಗಿರುತ್ತೇನೆ. ಆಗ ಆರೋಪಿತರು ನನ್ನ ತಮ್ಮ ಕೆಎಸ್‌ಆರ್‌ಟಿಸಿ ಬಸ ಚಾಲಕನಿದ್ದು ಆತನ ಬಸ್ಸನ್ನು ನಿಲ್ಲಿಸಿ 1 ನೇ ಆರೋಪಿಯ ಎಕ್ಸಎಲ್ ಸೂಪರ್ ದ್ವಿಚಕ್ರ ವಾಹನವನ್ನು ಪಕ್ಕಕ್ಕೆ ತಳ್ಳಿ ಹಳೆ ವೈಶಮ್ಯದಿಂದ ನನ್ನ ತಮ್ಮನಿಗೆ ಜಾಫರ, ಹಾಜಿ ಹಾಗೂ ಮೋದಿನ್ ಇವರು ಕಟ್ಟಿಗೆಯಿಂದ ಹೊಡೆಯುತ್ತಿದ್ದರು. ನಾನು ಹೋಗಿ ಜಗಳ ಬಿಡಿಸಿರುತ್ತೇನೆ. ಸದರಿ ಘಟನೆಯಲ್ಲಿ ನನ್ನ ತಮ್ಮನ ಕೈಗೆ ಗಾಯಗಳಾಗಿದ್ದವು. ನಂತರ ಅದೇ ದಿನ ನಾನು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿ ದೂರಿನ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಎರಡು ಬಡಿಗೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು MO-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ.ಎನ್ ವಕೀಲರಿಂದ.**

ಟಿ.ಎನ್ ವಕೀಲರು ಪಾಟೀ ಸವಾಲೀಗಾಗಿ ಸಮಯ ಕೇಳಿರುತ್ತಾರೆ, ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.